International Journal of Applied Research 2014; 1(1): 371-372




**ISSN Print:** 2394-7500
**ISSN Online:** 2394-5869
**Impact Factor:** 3.4
IJAR 2014; 1(1): 371-372
www.allresearchjournal.com
Received: 13-11-2014
Accepted: 19-12-2014

**ಪ್ರೊ. ಸಿದ್ದಣ್ಣ ಪಿ. ಬೀಡಗೊಂಡ**
ಕನ್ನಡ ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಬಸವನ-ಬಾಗೇವಾಡಿ, ಜಿಲ್ಲೆ:ಬಿಜಾಪುರ, ಕರ್ನಾಟಕ, ಭಾರತ

**Correspondence**
**ಪ್ರೊ. ಸಿದ್ದಣ್ಣ ಪಿ. ಬೀಡಗೊಂಡ**
ಕನ್ನಡ ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಬಸವನ-ಬಾಗೇವಾಡಿ, ಜಿಲ್ಲೆ:ಬಿಜಾಪುರ, ಕರ್ನಾಟಕ, ಭಾರತ

# ಪುಸ್ತಕದ ಓದು ಮತ್ತು ಸಂಸ್ಕಾರ

**ಪ್ರೊ. ಸಿದ್ದಣ್ಣ ಪಿ. ಬೀಡಗೊಂಡ**

ದೇಹಕ್ಕೆ ವ್ಯಾಯಾಮ ಎಷ್ಟು ಮುಖ್ಯವೊ ನಮ್ಮ ಬುದ್ಧಿ ಶಕ್ತಿ ವೃದ್ಧಿಸಲು ಪುಸ್ತಕಗಳ ಓದಿನ ಮಹತ್ವವು ಅಷ್ಟೆ ಮುಖ್ಯವಾಗಿದೆ. ವಾಯಾಮದಿಂದ ದೇಹ ಸದೃಡವಾದಂತೆ ಪುಸ್ತಕಗಳ ಓದಿನಿಂದ ಮನಸ್ಸಿನ ಎಲ್ಲಾ ಕೊರತೆಗಳನ್ನು ನೀಗಿಸಲು ಒಊದು ಸಹಕಾರಿಯಾದಿ. ಶಕ್ತಿಯನ್ನು ಎಲ್ಲ ಅಂಗಗಳಲ್ಲಿಯೂ ಪ್ರವಹಿಸುವಂತೆ ಮಾಡಲು ನಾವು ವ್ಯಾಯಮ ಮಾಡುವಂತೇಯೆ ಈ ಓದು ಬುದ್ದಿ ಶಕ್ತಿಯ ಎಲ್ಲ ಅಂಗಗಳನ್ನು ಪರಸ್ಪರ ಸುಸಂಬದ್ದಗಳನ್ನಾಗಿ ಮಾಡುತ್ತದೆ. ಈ ಪುಸ್ತಕವಾಚನದಿಂದ ಮನಸ್ಸಿನ ಎಲ್ಲ ಕೊರತೆಗಳನ್ನು ಸರಿಪಡಿಸುವದರ ಜೊತೆಗೆ ಪುಸ್ತಕಗಳು ಬದುಕಿನ ಮಾರ್ಗದರ್ಶನ ಮಾಡುತ್ತವೆ. ಪುಸ್ತಕಗ ಓದಿನಿಂದ ನಮ್ಮ ವ್ಯಕ್ತಿತ್ವವು ಸಿರಿವಂತವಾಗಿ ಬೆಳೆಗುತ್ತದೆ. ನಮ್ಮ ಕವಿರಾಜಮಾರ್ಗದ ಕತೃ ಆಗಿರುವ ಶ್ರೀ ವಿಜಯಕೃತ ತನ್ನ 'ಕವಿರಾಜಮಾರ್ಗದಲ್ಲಿನ ಹೇಳಿದಂತೆ

ಪದನರಿದು ನುಡಿಯಲು ನುಡಿ
ದುದನರಿದಾರಯಲು ಮಾರ್ಪರಾನಾಡವರ್ಗಳ್
ಚದುರ್ ನಿಜದಿಂ ಕುರಿತೋ
ದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್

ಜ್ಞಾನವಾಹಿನಿಗಳಾದ ಗ್ರಂಥಗಳು ಗುರುಗಳಂತೆ ಬುದ್ದಿಯನ್ನು ಕಲಿಸುತ್ತವೆ. ತಂದೆಯೆಂತೆ ಹಿತವನ್ನು ಬಯಸುತ್ತವೆ. ತಾಯಿಯಂತೆ ಪ್ರೀತಿಸುತ್ತವೆ. ಗೆಳಯರಂತೆ ನೆರವಾಗುತ್ತವೆ. ಸತಿಯಂತೆ ಸೂಕ್ತ ಸಲಹೆಗಳನ್ನು ಕೊಡುತ್ತವೆ ನಮ್ಮ ಶರೀರ ಮನಸ್ಸು ಅಂತಃಕರಣಗಳನ್ನು ತಿದ್ದಿ ತೀಡುತ್ತವೆ. ಮನಸ್ಸಿಗೆ ಶಾಂತಿ ಸಮಾಧಾನಗಳನ್ನು ತರುತ್ತವೆ. ಹೊಸ ಹೊಸ ಸಂಶೋಧನಗೆ ಪ್ರಚೋದನೆ ನೀಡುತ್ತವೆ. ಪುಸ್ತಕಗಳಿಂದ ಜ್ಞಾನದ ದೀವಿಗೆ ಸದಾ ಬೆಳಗುತ್ತಿರುತ್ತದೆ.

ಪುಸ್ತಕಗಳ ಮಹತ್ವ ಕುರಿತು ಅನೇಕ ವಿದ್ವಾಂಸರು ತಮ್ಮ ಅನುಭವ ಹೇಳಿದ್ದಾರೆ. ಸಾಹಿತಿಗಳು ಕವಿಗಳು ವಿರ್ಮಶಕರು ಲೇಖಕರು ಕಾದಂಬರಿಗಾರರು ತಾವು ತಿಳಿದದ್ದನ್ನು ಗ್ರಹಿಸಿದ್ದನ್ನು ಪುಸ್ತಕ ರೂಪದಲ್ಲಿ ಬರೆದು ಆ ವಿಷಯಗಳಿಗೆ ಒಂದು ಶಾಶ್ವತ ರೂಪ ಕೊಡುತ್ತಾರೆ. ಕೃತಿಕಾರರ ದೇಹ ಕಣ್ಮರೆಯಾದರೂ ಅವರು ರಚಿಸಿದ ಕೃತಿಗಳು ರಾರಾಜಿಸುತ್ತವೆ.

ಮನುಷ್ಯನ ಬದುಕನ್ನು ಸಮಗ್ರಗೊಳಿಸುವಲ್ಲಿ, ವೈವಿಧ್ಯಮಯಗೊಳಿಸುವಲ್ಲಿ, ಹಾಗೂ ಅರ್ಥಪೂರ್ಣಗೊಳಿಸುವಲ್ಲಿ ಪುಸ್ತಕಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಪುಸ್ತಕಗಳು ಎಲ್ಲರಿಗೂ ಎಲ್ಲ ಸಂದರ್ಭದಲ್ಲಿಯೂ ದೊರಕುವ ಅಮೂಲ್ಯ ಸಂಪತ್ತು. ಹಣ, ವೈಭವ, ಅಂತಸ್ತು, ಕೀರ್ತಿ, ಅಧಿಕಾರ ಇವು ತಾತ್ಕಾಲಿಕವಾಗಿ ಸುಖ ಕೊಡುತ್ತವೆ. ಆದರೆ ಪುಸ್ತಕಗಳೂ ಶಾಶ್ವತವಾಗಿ ಸುಖ ಕೊಡುತ್ತವೆ. ಮನಸ್ಸಿಗೆ ಮುದ ನೀಡುತ್ತವೆ ಮತ್ತು ಪರಿವರ್ತನೆಗೊಳಿಸುತ್ತವೆ ನಮ್ಮ ಬದುಕನ್ನು ರೂಪಿಸುತ್ತವೆ. ಜೀವನದ ಕೊನೆಯವರಗೊ ತಾನೊಬ್ಬ ವಿದ್ಯಾರ್ಥಿಯೆಂಬ ಅರಿವನ್ನುಂಟು ಮಾಡುತ್ತವೆ. ಜೀವನದ ಪ್ರಗತಿಗೆ ಓದು ಬಹುಮುಖ್ಯವಾದಂತೆ ಬರವಣಿಗೆ ಶೈಲಿ ರೂಪಿಸಿಕೊಳ್ಳಲು ತನ್ನನು ತಾನು ರೂಪಿಸಿಕೊಳ್ಳಲು ಶಬ್ದ ಭಂಡಾರ ಹೆಚ್ಚಿಸಕೊಳ್ಳಲು ಪುಸ್ತಕಗಳೂ ಅತ್ಯುಪಕಾರಿಯಾಗಿವೆ. ಮನುಷ್ಯನಿಗೆ ಗ್ರಹಿಕೆ ಬಲು ಮುಖ್ಯ ಸರಳವಾಗಿ ಎಲ್ಲರೂ ಗ್ರಹಿಸಬಹುದು ಆದರೆ ಎದುರಿನ ವ್ಯಕ್ತಿಯಲ್ಲಿನ ಹಾವಭಾವ ಮತ್ತು ಅಂತರಾಳದ ಭಾವಗಳನ್ನು ಅರಿತುಕೊಳ್ಳುವ ಸಾಮರ್ಥ್ಯ ಓದಿನಿಂದ ಮಾತ್ರ ಲಭ್ಯವಾಗುತ್ತದೆ.

ಭಗವದ್ಗಿತೆಯಲ್ಲಿ ಹೇಳೀರುವಂತೆ "ಜ್ಞಾನಕ್ಕಿಂತ ಮಿಗಿಲಾದ ವಸ್ತು ಮತ್ತೊಂದಿಲ್ಲ" ಮಾನವನ ಜ್ಞಾನಾಭಿವೃದ್ಧಿಗೆ ಉತ್ತಮ ಗ್ರಂಥಗಳು ಸಹಾಯಕಾರಿಯಾಗಿವೆ.

ಇವು ಮನುಷ್ಯನ ಜ್ಞಾನವನ್ನು ವೃರ್ಧಿಸುತ್ತವೆ. ಅಂತಲೇ 'ಉತ್ತಮ ಪುಸ್ತಕವು ಜ್ಞಾನಿಯ ಚಿರಂತನ ಚೈತನ್ಯ ರೂಪ' ಎಂದು ಮಿಲ್ಟನ್ ವಿದ್ವಾಂಸರು ಹೇಳಿದ್ದಾರೆ 'ತನ್ನ ಎಲ್ಲ ಸಂಪತ್ತು ಪುಸ್ತಕಗಳಲ್ಲಿದೆ' ಎಂದು ಸಾಕ್ರೆಟಿಸ್ ಹೇಳುತ್ತಿದ್ದಾನೆ. 17ನೇ ಶತಮಾನದ ಗ್ರಂಥಪಾಲಕನಾದ ಭಾರ್ಥೋಲಿಯನ್ ಗ್ರಂಥಗಳ ಮಹತ್ವ ಕುರಿತು. 'ಗ್ರಂಥಗಳಿಲ್ಲದಿದ್ದಲ್ಲಿ ದೇವರ ಮೂಕನಾಗಿ ಬಿಡುತ್ತಾನೆ. ನ್ಯಾಯ ದೇವತೆ ನಿದ್ರಿಸುತ್ತಾಳೆ. ವಿಜ್ಞಾನ ಸ್ಥಗಿತಗೊಳಿಸುತ್ತದೆ. ತತ್ವಜ್ಞಾನ ಕುಂಟತ್ತದೆ. ಸಾಹಿತ್ಯ ಮಂದವಾಗುತ್ತದೆ. ಉಳಿದುದೆಲ್ಲವೂ ಅಂಧಕಾರದಲ್ಲಿ ಮುಳುಗಿ ಬಿಡುತ್ತದೆ, ಎಂದು ಸಾರಿದ ಹೇಳಿದ.

ಮಿಥಿಲೆಯ ದೋರೆ ಜನಕ ರಾಜನು ಓದಿನಿಂದ ಅಪಾರ ಜ್ಞಾನಿಯಾಗಿದ್ದನು ಅವನ ಪುಸ್ತಕ ಪ್ರೀಯತೆ ಒಂದು ಜನಪ್ರೀಯ ಕಥಯಂತೆ ಇದೆ. ಅರಸರು ಪುಸ್ತಕಗಳ ಪ್ರೀತಿಯಿಂದ ನಿರ್ಮಿಸಿದ ಸೊಗಸಾದ ದೊಡ್ಡ ಗ್ರಂಥಾಲಯವು ಸುಟ್ಟು ಭಸ್ಮವಾಯಿತು. ಭಯಬೀತಗೊಂಡು ಆಸ್ಥಾನಿಕರು ರಾಜನಿಗೆ ಹೇಳಿದಾಗ ಜನಕ ರಾಜನು ನಿರುದ್ವಿಗ್ನನಾಗಿ ಇರುವುದನ್ನು ಕಂಡು ಅವರಿಗೆ ಸೋಜಿಗವೆನಿಸಿತು. ಆಗ ಅರಸ ಅವರಿಗೆ ತನ್ನ ತಲೆಯ ಕಡೆ ಬೆರಳು ಮಾಡಿ ತೋರಿಸುತ್ತ ಇಲ್ಲಿ ನನ್ನ ಜ್ಞಾಣ ಸುರಕ್ಷಿತವಾಗಿದೆ. ನನ್ನ ಗ್ರಂಥಾಲಯವನ್ನು ನಾನು ಇಲ್ಲಿ ಕಾಯ್ದಿರಿಸಿದ್ದೇನೆ ಎಂದನು.

ಜನಕರು ದೊರೆಯಾಗಿದ್ದರೂ ಓದಿನಿಂದ ದೊಡ್ಡ ಜ್ಞಾನಿಯಾಗಿದ್ದ 'ಓದು ಬಲ್ಲವನೇ ತತ್ವಜ್ಞಾನಿ ತತ್ವಜ್ಞಾನಿಯಾದವನೆ ದೊರೆಯಾಗಬೇಕು ಎಂಬುದು ಪ್ಲೇಟೋನ ಹೇಳಿಕೆ.

'ಓದಿ ಮರುಳಾಗಬಾರದು ಓದದೆಯೂ ಮರುಳಾಗಬಾರದು, ಓದಿ ಹುರುಳಾಗಬೇಕು' ಎಂಬುದು ವಿ.ಕೃ ಗೋಕಾಕರ ಉಕ್ತಿಯಾಗಿದೆ.

ಬ್ರಿಟನ್ನಿನ ಭೌತ ವಿಜ್ಞಾನಿ ಹಾಗೂ ಗಣಿತ ತಜ್ಞ ಐಜಾಕ್ ನ್ಯೂಟನ್‌ನಿಗೆ ಪುಸ್ತಕಗಳ ಬಗ್ಗೆ ಅಪಾರ ಪ್ರೀತಿ, ಅವನು ಪುಸ್ತಕಗಳ ಅಂಗಡಿಗೆ ಹೋಗಿ ತನಗೆ ಬೇಕಾದ ಪುಸ್ತಕಗಳ ಪಡೆಯುತ್ತಿದ್ದ. ಒಂದು ವೇಳೆ ಪುಸ್ತಕಗಳ ಸಿಗದೆ ಇದ್ದರೆ ಕಣ್ಣೀರು ಇಡುತ್ತಿದ್ದ.

ಅಮೇರಿಕಾ ಅಧ್ಯಕ್ಷ ಜಾನ್.ಎಫ್. ಕನೆಡಿಯವರು ಬಹು ದೊಡ್ಡ ಓದುಗರು ಒಮ್ಮೆ ಅನಾರೋಗದಿಂದ ಶಸ್ತ್ರ ಚಿಕಿತ್ಸೆಗೊಳಗಾಗಿ 6 ತಿಂಗಳ ವಿಶ್ರಾಂತಿ ತಗೆದುಕೊಳ್ಳುವ ಸಂದರ್ಭ ಬರುತ್ತದೆ.ಈ ಸಮಯದಲ್ಲಿ ಅನೇಕ ಪುಸ್ತಕಗಳನ್ನು ತರಸಿಕೊಂಡು ಅವುಗಳನ್ನು ಅವರ ಹೆಂಡತಿ ಸ್ನೇಹಿತರಿಂದ ಓದಿಸಿ ಕೇಳಿಸಿಕೊಡರು. ನಂತರ ಕೇಳಿದ್ದನು ತಮ್ಮ ಬಾಯಿಯಿಂದ ಹೇಳಿ ಬರೆಸಿದರು ಬರೆಸಿದ್ದು "ಪ್ರೊಫೈಲ್ಸ ಇನ್ ಕರೇಜ್" ಎಂಬ ಉತ್ಕೃಷ್ಟ ಕೃತಿಯಾಗಿ ಹೊರಬಂದಿತು ಆ ಕೃತಿ ಅಮೇರಿಕೆಯ ಧೈರ್ಯಶಾಲಿಗಳ ವ್ಯಕ್ತಿ ಚಿತ್ರಣಕ್ಕೆ ಸಂಭಂದಿಸಿತು. ಇಂತ ಕಲೆ ಅವರ ಅಪಾರ ಧೈರ್ಯಶಾಲಿಗಳ ವ್ಯಕ್ತಿ ಚಿತ್ರಣಕ್ಕೆ ಸಂಬಂದಿಸಿತ್ತು. ಇಂತ ಕಲೆ ಅವರ ಅಪಾರ ಓದಿನಿಂದ ಸಂಪಾದಿಸಿದ ಜ್ಞಾನ ಸಂಪತ್ತು ಮತ್ತು ಶಬ್ದ ಸಂಪತೇ ಕಾರಣ. ಜೋತೆಗೆ ಅಭಿವ್ಯಕ್ತ ಮಾಡುವ ಸಾಮರ್ಥ್ಯವನ್ನು ಓದಿನಿಂದ ಪಡೆದಿದ್ದರು.

ಭಾರತದ ಸಮಾಜವಾದಿ ಸಂಘಟನೆಯಲ್ಲಿ ಜಯಪ್ರಕಾಶ ನಾರಾಯಣರಾವ, ಮನೋಹರಿ ಲೋಹಿಯಾ, ಅಶೋಕ ಮೆಹೆತಾ ಪ್ರಮುಖರು. ಅಶೋಕ ಮೆಹತಾರು ಒಂದು ಜ್ಞಾನಕೋಶವೆ ಆಗಿದ್ದರು. ಜ್ಞಾನವನ್ನು ಜನಕನಂತೆ ತಮ್ಮ ತಲೆಯಲ್ಲಿ ತುಂಬಿಕೊಂಡಿದ್ದರು. ಅವಿವಿಹಾಹಿತರಾಗಿದ್ದ ಅವರು ಸತತ ಪುಸ್ತಕಗಳೋಂದಿಗೆ ಇರುತ್ತಿದ್ದರು. ಪುಸ್ತಕಗಳು ಅವರ ಸಂಗಾತಿಗಳಾಗಿದ್ದವು. ಮನೆಯಲ್ಲಿಯೇ ಸುಂದರ ಬೃಹತ್ ಗಂಥಾಲಯವನ್ನು ನಿರ್ಮಿಸಿಕೊಂಡಿದ್ದರು. ಅವರೊಂದಿಗೆ ಮಾತನಾಡುವವರಿಗೆ ಜ್ಞಾನಭಂಡಾರದ ದರ್ಶನವಾಗುತ್ತಿತು.

ಜವಾಹರಲಾಲ ನೆಹರು ತಮ್ಮ ಕೆಲಸದ ಒತ್ತಡದಲ್ಲಿಯೂ ಪ್ರತಿದಿನ ಒಂದು ಹೊಸ ಪುಸ್ತಕ ಓದದೆ ಎಂದೂ ನಿದ್ರೆ ಹೊಗುತ್ತಿರಲಿಲ್ಲ. ಹೊಸ ವಿಚಾರ ತಿಳಿದರೆ ಒಬ್ಬ ಹೊಸ ಮನುಷ್ಯ ಆದಂತೆ ಎಂದು ಅವರು ಭಾವಿಸುತ್ತಿದ್ದರು. ಅವರು ಎಲ್ಲಯೇ ಹೋಗಲಿ ಪುಸ್ತಕಗಳು ಅವರಿಗೆ ನಿತ್ಯ ಸಂಗಾತಿಗಳಾಗಿ ಇರುತ್ತಿದ್ದವು.

ಓದಿನಿಂದ ಡಿ. ವ್ಹಿ. ಗುಂಡಪ್ಪನವರು ಬುದ್ದಿಯ ಬ್ರಹ್ಮರೆನಿಸಿ ಜ್ಞಾನದ ಅಕ್ಷಯ ನಿಧಿಯೇ ಆದರು. ಕನ್ನಡ ಸಂಸ್ಕ್ರತ ಇಂಗ್ಲಿಷನಲ್ಲಿ ಪ್ರಖಾಂಡ ಪಾಂಡಿತ್ಯ ಗಳಿಸಿದವರು. ಅವರಷ್ಟು ಓದಿದವರು ಬರೆದವರು ಕರ್ನಾಟಕದಲ್ಲಿಯೇ ಇಲ್ಲ ಅಂತ ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅವರು ಸಾಹಿತಿ, ಪತ್ರಿಕೊದ್ಯಮಿ ಸಮಾಜ ಸೇವಕರು ಅನೇಕ ಮಹಾನ್ ಸಾಹಿತಿಗಳಿಗೆ ಗುರು ಆಗಿದ್ದರು. ಅರ್ಥಪೂರ್ಣ ಪರಿಶುದ್ದ ಗದ್ಯವನ್ನು ಬರೆಯುತ್ತಿದ್ದರು. ಅವರು ಬರೆದಿದ್ದೆಲ್ಲ ಚೊಕ್ಕ ಚಿನ್ನವೆಂದು ಅ.ನ.ಕೃ ಹೇಳುತ್ತಿದ್ದರು. ಬೆಳದವರಿಗೆ ಬೆಳಯಬೇಕೆಂದಿರುವವರೆಲ್ಲರಿಗೂ, ಸ್ನೇಹಿತರು, ಮಾರ್ಗದರ್ಶಕರು, ತತ್ವಜ್ಞಾನಿಗಳು ಆಗಿದ್ದರು. ಗ್ರಂಥಗಳು ಬಾಳನ್ನು ಬೆಳಗಿಸುವ ಅಮೃತ ಸಂಜೀವಿನಿ ಎಂದು ಭಾವಿಸಿದ್ದರು.

ಡಾ॥ ಜಿ.ಪಿ. ರಾಜರತ್ನಂ ಹೇಳುವಂತೆ 'ನಮ್ಮ ಮನಸ್ಸು ಒಂದು ಬಟ್ಟೆಯಿದ್ದ ಹಾಗೆ, ಒಳ್ಳೆಯದನ್ನು ಹೀರುತ್ತದೆ. ಕೆಟ್ಟದನ್ನೂ ಹೀರುತ್ತದೆ. ಹೀಗೆ ಹೀರಿಕೊಂಡ ಕೊಳಗಳನ್ನು ತೊಳೆದು ಹೋಗಲಾಡಿಸಿಕೊಳ್ಳುವುದಕ್ಕೆ ಪುಸ್ತಕವೆಂಬುವು ಒಳ್ಳೆಯ ಸೋಪು ಇದ್ದಹಾಗೆ. ಓದಿದನ್ನು ಮನನ ಮಾಡುವುದು ಸೋಪ್ ಹಾಕಿದ ಬಟ್ಟೆಯನ್ನು ಒಗೆದ ಹಾಗೆ. ಆದ್ದರಿಂದ ಒಳ್ಳೆಯ ಪುಸ್ತಕ ಓದಬೇಕು. ಆದರಿಂದ ಪಡೆದ ತಿಳುವಳಿಕೆ ನಡುವಳಿಕೆಯಾಗಿ ಫಲಿಸಬೇಕು.

ಇಂದಿನ ಸ್ಪರ್ಧಾತ್ಮಕ ಯುಗದ ಪ್ರಪಂಚದಲ್ಲಿ ಮಾಹಿತಿಯ ಸ್ಫೋಟ ಉಲ್ಬಣ ಗೋಳಹತ್ತಿದೆ. ಕಂಪ್ಯೂಟರ ಮತ್ತು ಅಂತರ್ಜಾಲ ತಾಣವೂ ಇದನ್ನು ಸರೆಹಿಡಿದಿದೆ. ಪ್ರಪಂಚದ ಮೂಲೆ ಮೂಲೆಯಲ್ಲಿಯ ಜ್ಞಾನ ಬೇಕೆಂದಾಗ ಕ್ಷಣಾರ್ದದಲ್ಲಿ ಅಂತರಜಾಲಾ ತಂತ್ರಜ್ಞಾನದಿಂದ ಪಡೆಯಲಾಗುತ್ತದೆ. ಇದು ಮಾನವನ ಸರ್ವಾಂಗ ಅಬಿವೃದ್ದಿಗೆ ಪೂಕರವಾದಂತೆ ಪುಸ್ತಕ ಸಂಸ್ಕೃತಿಯುವು ಮಾನವನ ಸರ್ವಾಂಗ ಸುಂದರ ಬದುಕಿಗೆ ಕಾರಣವಾಗುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಸಾಹಿತ್ಯ ಸಂಗಮ– ಶ್ರೀ ಸ.ಸ. ಮಾಳವಾಡ
2. ಕನ್ನಡ ಸಾಹಿತ್ಯ ಚರಿತ್ರಯ ಚಾರಿತ್ರಿಕ ಬೆಳವಣಿಗೆ– ಶ್ರೀ ಸಿ. ವೀರಣ್ಣ
3. ಸಾಲು ದೀಪಗಳು– ಕನ್ನಡ ಸಾಹಿತ್ಯ ಅಕಾಡೆಮಿ
4. ನವ್ಯ ಸಾಹಿತ್ಯ– ಶ್ರೀ ಶಂತಿನಾಥ ದೇಸಾಯಿ